ಅಸಲು ದಾವೆ ಸಂಖ್ಯೆ- 288/2013
ಡಿಡಬ್ಲ್ಯೂ- 01
ದಿನಾಂಕಃ 12.10.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ

ನನ್ನ ತಂದೆ ಮನೆಯಲ್ಲಿ ಇರುತ್ತಾರೆ. ಅವರು ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದರು, ಈಗ ಯಾವುದೇ ಕೆಲಸ ಮಾಡುವುದಿಲ್ಲ, ಅವರಿಗೆ ಆರೋಗ್ಯ ಸರಿ ಇರುವುದಿಲ್ಲ. ಅವರು ಅಸ್ತಮಾ ಖಾಯಿಲೆಯಿಂದ ಬಳಲುತ್ತಿದ್ದಾರೆ. ಅವರು ಹೊರಗಡೆ ತಿರುಗಾಡುವುದಿಲ್ಲ. ನನ್ನ ತಂದೆ ಇವತ್ತಿಗೂ ವ್ಯಾಪಾರ ಮಾಡುತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಯೂಸೂಬಖಾನನನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ, ನಾನು ನೋಡಿದ್ದೇನೆ. ಆತ ಯಾವಾಗ ತೀರಿಕೊಂಡಿರುತ್ತಾನೆ ನನಗೆ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಸಹೋದರರು ನನಗೆ ಮಾಹಿತಿ ಇಲ್ಲ. ವಾದಿಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. ಯೂಸೂಬಖಾನ ಎಲ್ಲಿ ತೀರಿಕೊಂಡಿರುತ್ತಾರೆ ಗೊತ್ತಿಲ್ಲ, ಆದರೆ ಅವರು ಹುಬ್ಬಳ್ಳಿಯಲ್ಲಿ ಇರುತ್ತಿದ್ದರು. ಅವರಿಗೆ ಏನು ಆಗಿತ್ತು ನನಗೆ ಗೊತ್ತಿಲ್ಲ. ಅವರು ತೀರಿಕೊಂಡಾಗ ನಾನು ಹೋಗಿಲ್ಲ. ವಾದಿ ಯೂಸೂಬಖಾನ ಅಥವಾ ಅವರ ಕುಟುಂಬದವರು ನಮಗೆ ಸಂಬಂಧಿಕರಲ್ಲ. ನಾನು ದಾವಾ ಆಸ್ತಿ ನೋಡಿದ್ದೇನೆ. ದಾವಾ ಅಸ್ತಿ 2 1/2 ಗುಂಟೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಖುಲ್ಲಾ ಜಾಗೆ ಇರುತ್ತದೆ ಎಂದರೆ ಸರಿ. ವಾದಿಯ ಮನೆ ನೋಡಿದ್ದೇನೆ. ಅವರ ಮನೆಯ ಆಜು ಬಾಜು ಯಾರ ಮನೆ ಇರುತ್ತದೆ ನನಗೆ ಗೊತ್ತಿಲ್ಲ. ಸಯ್ಯದಸಾಬ ಖಂದಿಲವಾಲೆ ಇವರ ಮನೆ ಪಕ್ಕದಲ್ಲಿ ವಾದಿಯ ಮನೆ ಇರುತ್ತದೆ. ವಾದಿಯ ಮನೆ ಯಾವ ದಿಕ್ಕಿಗೆ ಮುಖ ಮಾಡಿರುತ್ತದೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ವಾದಿಯದು ಎಂದರೆ ಸರಿ. ವಾದಿ ಯೂಸೂಬಸಾಬ ಶಾಲೆ ಕಲಿತಿರುವುದಿಲ್ಲ ಎನ್ನುವುದು ಸರಿ. ದಾವಾ ಆಸ್ತಿಯ ಚಕಬಂದಿ ಹೇಳಲು ಬರುತ್ತದೆ. ದಾವಾ ಆಸ್ತಿಯ ಉತ್ತರಕ್ಕೆ ಶ್ರೀ ಲಲಾಟೇಶ್ವರ ಶಾಲೆ ಇರುತ್ತದೆ. ದಕ್ಷಿಣಕ್ಕೆ ಸರಕಾರಿ ರಸ್ತೆ. ಪೂರ್ವಕ್ಕೆ ವಾದಿಯರ ಪ್ಲಾಟು ಇರುತ್ತದೆ. ಪಶ್ಚಿಮಕ್ಕೆ ಅಲ್ಲಾವುದ್ದೀನ ಇವರ ಪ್ಲಾಟು ಇರುತ್ತದೆ. ನನ್ನ ತಂದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ತನ್ನದೇ ಹೆಬ್ಬೆಟ್ಟು ಒತ್ತಿ ಖೊಟ್ಟಿದಾಖಲೆ ಮೂಲಕ ಖಾತೆ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆ ಒಬ್ಬರ ಆಸ್ತಿ ಇನ್ನೊಬ್ಬರಿಗೆ ಕೊಡಿಸುವ ವ್ಯವಹಾರ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 30 ವರ್ಷದಿಂದ ನನ್ನ ತಂದೆ ದಲ್ಲಾಳಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇವತ್ತಿಗೂ ನನ್ನ ತಂದೆ ಅದೇ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕಃ 22.02.2000 ರಂದು ಸದರಿ ದಾವಾ ಆಸ್ತಿಯನ್ನು ನನ್ನ ತಂದೆಗೆ ಭಕ್ಷಿಸ ಕೊಟ್ಟಿರುತ್ತಾರೆ. ನನ್ನ ತಂದೆ ಹೆಸರಿನಲ್ಲಿ ನೊಂದಣಿಯಾದ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಸದರಿ ಭಕ್ಷಿಸ ಮಾಡಿರುತ್ತಾರೆ ಅಂತಾ ಹೇಳುವ ದಾಖಲೆ ಬರೆಯುವಾಗ ನಾನು ಇರಲಿಲ್ಲ. ಆ ಕಾರಣ ಸದರಿ ಭಕ್ಷಿಸ ಕುರಿತು ಸಂಪೂರ್ಣ ಮಾಹಿತಿ ಇಲ್ಲ ಎನ್ನುವುದು ಸರಿ. ಯಾರು ಯಾರು ಹೆಬ್ಬಟ್ಟು ಒತ್ತಿರುತ್ತಾರೆ ಹೇಳಲು ಆಗುವುದಿಲ್ಲ. ವಾದಿಗೆ ಅವರ ಹಿರಿಯರಿಂದ ಸದರಿ ದಾವಾ ಆಸ್ತಿ ಬಂದಿರುತ್ತದೆ ಎನ್ನುವುದು ಸರಿ. ಆ ದಿನ ಹಕ್ಕು ಬಿಟ್ಟ ಪತ್ರ ಸಹ ಮಾಡಿಕೊಟ್ಟಿರುತ್ತಾರೆ . ಸದರಿ ಹಕ್ಕು ಬಿಟ್ಟ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಹಕ್ಕು ಬಿಟ್ಟ ಪತ್ರ ಯಾರು ಮಾಡಿರುತ್ತಾರೆ ಮಾಹಿತಿ ಇದೆ . ಸದರಿ ಹಕ್ಕು ಬಿಟ್ಟ ಪತ್ರವನ್ನು ಉಪನೊಂದಣಿ ಕಾರ್ಯಲಯದಲ್ಲಿ ನೊಂದಣಿ ಮಾಡಿಸಿರುತ್ತಾರೆ. ಸದರಿ ಹಕ್ಕು ಬಿಟ್ಟ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಗೆ ನಾನು ಒಬ್ಬನೇ ಮಗ. ದಾವಾ ಆಸ್ತಿಯಿಂದ ಮಜೀದ ಹೈಸ್ಕೂಲ್ 400 ಮೀಟರ ಆಗುತ್ತದೆ ಎಂದರೆ ಹೆಚ್ಚು ಕಡಿಮೆ ಆಗಬಹುದು. ಖೊಟ್ಟಿ ದಾಖಲೆ ಸೃಷ್ಟಿಸಿ ನನ್ನ ತಂದೆ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದು ನಿಜ ಗೊತ್ತಾಗುತ್ತದೆ ಅಂತಾ ಆರೋಗ್ಯವಾಗಿದ್ದರೂ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಯರ ಮನೆ ಬಹಳ ದಿನಗಳಿಂದ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಮನೆಯನ್ನು ನೋಡಿಲ್ಲ, ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಈಗ ಬಾಡಿಗೆ ಮನೆಯಲ್ಲಿ ಇರುತ್ತಾರೆ ಎಂದರೆ ಹುಬ್ಬಳ್ಳಿಯಲ್ಲಿ ಇರುತ್ತಾರೆ. ವಾದಿಯರಿಗೆ ಸವಣೂರಿನಲ್ಲಿ ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಬೇರೆ ಆಸ್ತಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಬೇರೆ ಯಾವ ಆಸ್ತಿ ಇರುತ್ತದೆ ಅದರ ಸರ್ವೆ ನಂಬರ ಅಥವಾ ಮನೆ ನಂಬರು ಹೇಳಲು ಬರುವುದಿಲ್ಲ. ವಾದಿ ಶಿಕ್ಷಣ ಕಲಿತಿರಲಿಲ್ಲ, ಆದ್ದರಿಂದ ಅವನಿಗೆ ತಿಳುವಳಿಕೆ ಇದ್ದಿರಲಿಲ್ಲ, ಅಂತಹವನಿಂದ ಮೋಸದಿಂದ ಖೊಟ್ಟಿ ದಾಖಲೆ ಸೃಷ್ಟಿಸಿ ಆಸ್ತಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯಿಂದ ನಮ್ಮ ತಂದೆಗೆ ವರ್ಗಾವಣೆಯಾದ ಯಾವುದೇ ನೊಂದಾಯಿತ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 8 ನೇ ತರಗತಿಯವರೆಗೆ ಕಲಿತಿರುತ್ತಾರೆ. ನಾನು 7 ನೇ ತರಗತಿಯವರೆಗೆ ಕಲಿತಿದ್ದೇನೆ. ಖೊಟ್ಟಿ ದಾಖಲೆ ಸೃಷ್ಟಿಸಿಕೊಂಡು ಬೇರೆಯವರ ಆಸ್ತಿ ಲಪಟಾಯಿಸುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.